ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103, ☎ : 0816-2255650, 2273511ಫ್ಯಾಕ್ಸ್ : 0816-2270719

ಸಂಖ್ಯೆ:ತು.ವಿ.: ಪ.ವಿ.:ವಿ.ನಿ.-03/2023-24/ 570

ದಿನಾಂಕ: 30.09.2023

NEP

# ಅಧಿಸೂಚನೆ

ವಿಷಯ: 2023 ರ ಮಾರ್ಚ್/ಏಪ್ರಿಲ್/ಮೇ ಮಾಹೆಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ (NEP) ನಡೆದ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಸ್ನಾತಕ ಪದವಿ ಪರೀಕ್ಷೆಗಳ ಫಲಿತಾಂಶಕ್ಕೆ ಸಂಬಂಧಿಸಿದಂತೆ ಉತ್ತರ ಪತ್ರಿಕೆಗಳ ಛಾಯಾ ಪ್ರತಿ / ಮರುಮೌಲ್ಯಮಾಪನದ ಮಾಹಿತಿ ಕುರಿತು.

.....

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023 ರ ಮಾರ್ಚ್/ಏಪ್ರಿಲ್/ಮೇ ಮಾಹೆಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ (NEP) ನಡೆದ ವಿವಿಧ ಸ್ನಾತಕ ಪದವಿಗಳ ಪ್ರಥಮ ಮತ್ತು ತೃತೀಯ ಬಿ.ಎ/ಬಿ.ಎಸ್ಸಿ/ಬಿ.ಎಸ್ಸಿ. (FAD)/ ಬಿ.ಕಾಂ/ ಬಿ.ಸಿ.ಎ / ಬಿ.ಎಸ್.ಡಬ್ಲ್ಯೂ/ ಬಿ.ಬಿ.ಎ ಮತ್ತು ಬಿ.ವೋಕ್ ಪರೀಕ್ಷೆಗಳ ಫಲಿತಾಂಶದಲ್ಲಿ ಇದ್ದಂತಹ ದೋಷಗಳನ್ನು ಸರಿಪಡಿಸಿ ಪರಿಷ್ಕೃತ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಸದರಿ ಫಲಿತಾಂಶವನ್ನು ಆಯಾ ವಿದ್ಯಾರ್ಥಿಗಳ ಯುಯುಸಿಎಮ್‌ಎಸ್ ತಂತ್ರಾಂಶ ಮೂಲಕ ಪಡೆದುಕೊಳ್ಳಬಹುದು. ಫಲಿತಾಂಶ ತಡೆಹಿಡಿಯಲಾಗಿರುವ ಅಥವಾ ಫಲಿತಾಂಶ ಪ್ರಕಟವಾಗದಿರುವ ಕುರಿತು ವಿದ್ಯಾರ್ಥಿಗಳು ಪ್ರಾಂಶುಪಾಲರ ಮೂಲಕ ಈ ಕಚೇರಿಗೆ ಸೂಕ್ತ ದಾಖಲೆ/ಮಾಹಿತಿಗಳನ್ನು ಒದಗಿಸಿ, **ಫಲಿತಾಂಶವನ್ನು ಪಡೆದುಕೊಳ್ಳತಕ್ಕದ್ದು.**

ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ಛಾಯಾ ಪ್ರತಿಗಳನ್ನು ಪಡೆಯಲು ಅಥವಾ ಮರುಮೌಲ್ಯಮಾಪನಕ್ಕೆ ಯುಯುಸಿಎಂಎಸ್ ತಂತ್ರಾಂಶದ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

| | | |
|---|---|---|
| 1. | ವಿದ್ಯಾರ್ಥಿಗಳು ಯುಯುಸಿಎಂಎಸ್ ತಂತ್ರಾಂಶದ ಮೂಲಕ ಛಾಯಾ ಪ್ರತಿಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 09.10.2023 |
| 2. | ಅಂತಿಮ ದಿನಾಂಕದ ನಂತರ ವಿದ್ಯಾರ್ಥಿಗಳು ತಮ್ಮ ಯುಯುಸಿಎಂಎಸ್ ತಂತ್ರಾಂಶದ ಲಾಗಿನ್ ಮೂಲಕ ಛಾಯಾಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು | |
| 3. | ವಿದ್ಯಾರ್ಥಿಗಳು ಯುಯುಸಿಎಂಎಸ್ ತಂತ್ರಾಂಶದ ಮೂಲಕ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 10.10.2023 ರಿಂದ 16.10.2023 |
| 4. | ಯುಯುಸಿಎಂಎಸ್ ತಂತ್ರಾಂಶದ ಮೂಲಕ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ನಂತರ ಅಂದೇ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾಲೇಜಿಗೆ ತಮ್ಮ ಅರ್ಜಿಯ ಮಾಹಿತಿಯನ್ನು ಸಲ್ಲಿಸತಕ್ಕದ್ದು.<br>ವಿ.ಸೂ: ಕಾಲೇಜಿನ ಪ್ರಾಂಶುಪಾಲರು ಅಗತ್ಯ ಮಾಹಿತಿಗಳೊಂದಿಗೆ ಕ್ರೋಢೀಕರಿಸಿ, ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಿ ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸಲು ಕಡೆಯ ದಿನಾಂಕ | 19.10.2023 |

ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಯಾವುದೇ ಕಾರಣದಿಂದಲೂ ಪರಿಗಣಿಸಲಾಗುವುದಿಲ್ಲ. ಛಾಯಾಪ್ರತಿ ಮತ್ತು ಮರುಮೌಲ್ಯಮಾಪನ ಶುಲ್ಕವನ್ನು ಯುಯುಸಿಎಂಎಸ್‌ನಲ್ಲೇ ನಿಗದಿಪಡಿಸಿದ ದಿನಾಂಕದೊಳಗೆ ಪಾವತಿಸಲು ಸೂಚಿಸಲಾಗಿದೆ.

**ಶುಲ್ಕಗಳ ವಿವರ:**

1. Photo copy for one subject : Rs. 210-00
2. Revaluation for one Subject : Rs. 260-00

(...2)

ಸೂಚನೆ:

1. ಪ್ರತಿಯೊಂದು ಸೈದ್ಧಾಂತಿಕ ವಿಷಯದಲ್ಲಿಯೂ ನಿಗಧಿಪಡಿಸಲಾದ ಗರಿಷ್ಠ ಅಂಕಗಳಿಗೆ ಶೇಕಡ 15 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಮಾಹಿತಿಯು ಮಾತ್ರ ಯು.ಯು.ಸಿ.ಎಂ.ಎಸ್ ನಲ್ಲಿ ವಿದ್ಯಾರ್ಥಿಯ ಮರುಮೌಲ್ಯಮಾಪನ ಅರ್ಜಿಯಲ್ಲಿ ಕಾಣಬಹುದಾಗಿದ್ದು, ಸದರಿ ಪತ್ರಿಕೆಗಳಿಗೆ ಮಾತ್ರ ವಿದ್ಯಾರ್ಥಿಯು ಮರುಮೌಲ್ಯಮಾಪನಕ್ಕೆ ಹಾಗೂ ಛಾಯಾಪ್ರತಿಗೆ ಅರ್ಜಿ ಸಲ್ಲಿಸಬಹುದಾಗಿದೆ.
2. ವಿದ್ಯಾರ್ಥಿಗಳು ತಮ್ಮ ಯು.ಯು.ಸಿ.ಎಂ.ಎಸ್. ಲಾಗಿನ್ ಮೂಲಕವಷ್ಟೇ ಉತ್ತರ ಪುಸ್ತಕಗಳ ಛಾಯಾ ಪ್ರತಿಗಾಗಿ ಹಾಗೂ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.
3. ಯ.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ರೀ-ಟೋಟಲಿಂಗ್ ಆಯ್ಕೆಗೂ ಅವಕಾಶ ಕಾಣಿಸುತ್ತಿದ್ದು, ಪ್ರಸ್ತುತ ನಮ್ಮ ವಿಶ್ವವಿದ್ಯಾನಿಲಯದ ಪರೀಕ್ಷಾ ಅಧಿಶಾಸನದ ಪ್ರಕಾರ ರೀ-ಟೋಟಲಿಂಗ್‌ಗೆ ಯಾವುದೇ ಅವಕಾಶ ಇಲ್ಲದ ಕಾರಣ ವಿದ್ಯಾರ್ಥಿಗಳ ರೀ-ಟೋಟಲಿಂಗ್ ಆಯ್ಕೆ ಮಾಡಬಾರದು. ಒಂದು ವೇಳೆ ರೀ-ಟೋಟಲಿಂಗ್ ಆಯ್ಕೆಯನ್ನು ವಿದ್ಯಾರ್ಥಿಗಳು ಸೆಲೆಕ್ಟ್ ಮಾಡಿದ್ದಲ್ಲಿಯೂ ಸಹ, ಅವರ ಆಯ್ಕೆಯನ್ನು ಪರಿಗಣಿಸುವುದಿಲ್ಲ.
4. ಉತ್ತರ ಪುಸ್ತಕಗಳ ಛಾಯಾಪ್ರತಿಗಳಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಉತ್ತರ ಪುಸ್ತಕಗಳನ್ನು ಸ್ಕ್ಯಾನ್ ಮಾಡಿ ಯು.ಯು.ಸಿ.ಎಂ.ಎಸ್. ತಂತ್ರಾಂಶಕ್ಕೆ ಅಪ್‌ಲೋಡ್ ಮಾಡುವುದರಿಂದ, ಸಂಬಂದಪಟ್ಟ ವಿದ್ಯಾರ್ಥಿಗಳು ಸದರಿ ಉತ್ತರ ಪುಸ್ತಕಗಳ ಛಾಯಾ ಪ್ರತಿಗಳನ್ನು ತಮ್ಮ ಯು.ಯು.ಸಿ.ಎಂ.ಎಸ್. ಲಾಗಿನ್ ಮೂಲಕವೇ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಯಾವುದೇ ಭೌತಿಕ ಪ್ರತಿಗಳನ್ನು ವಿತರಿಸಲಾಗುವುದಿಲ್ಲ
5. ಛಾಲೆಂಜ್ ಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ.

**ಮರುಮೌಲ್ಯಮಾಪನದ ಮಾನದಂಡಗಳು:-**

1. ಮೊದಲನೇ ಮೌಲ್ಯಮಾಪನ ಹಾಗೂ ಮರು ಮೌಲ್ಯಮಾಪನದ ನೀಡಲ್ಪಟ್ಟ ಅಂಕಗಳ ವ್ಯತ್ಯಾಸ ಶೇಕಡ 15ಕ್ಕಿಂತ ಕಡಿಮೆ ಇದ್ದಲ್ಲಿ, ಅವೆರಡರಲ್ಲಿನ ನಡುವೆ ಅತಿ ಹೆಚ್ಚು ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.
2. ಒಂದೊಮ್ಮೆ ವ್ಯತ್ಯಾಸ ಶೇಕಡ 15 ಹಾಗೂ ಅದಕ್ಕಿಂತ ಹೆಚ್ಚಿದ್ದಲ್ಲಿ ತೃತೀಯ ಮೌಲ್ಯಮಾಪನವಾಗುತ್ತದೆ. ಮೂರೂ ಮೌಲ್ಯಮಾಪನಗಳ ಪೈಕಿ ನಿಕಟವಾಗಿರುವ ಎರಡು ಮೌಲ್ಯಮಾಪನ ಅಂಕಗಳ ಸರಾಸರಿ ಅಂಕಗಳನ್ನು ಅಂತಿಮಗೊಳಿಸಲಾಗುವುದು.
3. ಒಂದೊಮ್ಮೆ ಮೂರು ಮೌಲ್ಯಮಾಪನಗಳಲ್ಲಿ ನೀಡಲಾದ ಅಂಕಗಳ ಪೈಕಿ ಯಾವುದಾದರೂ ಒಂದು ಮೌಲ್ಯಮಾಪನ ಅಂಕ ಉಳಿದೆರಡು ಮೌಲ್ಯಮಾಪನ ಅಂಕಗಳಿಂದ ಸಮಾನಾಂತರ ನಡುವಿನಲ್ಲಿದ್ದರೆ ಅಂತಹ ಸಂದರ್ಭದಲ್ಲಿ ಮೂರು ಅಂಕಗಳ ಪೈಕಿ ಹೆಚ್ಚು ಅಂಕಗಳಿರುವ ಎರಡು ಅಂಕಗಳ ಸರಾಸರಿ ತೆಗೆದು, ಸದರಿ ಅಂಕವನ್ನು ಅಂತಿಮಗೊಳಿಸಲಾಗುವುದು.

ಮೇಲ್ಕಂಡ ಮಾನದಂಡಗಳನ್ವಯ ಮರುಮೌಲ್ಯಮಾಪನವನ್ನು ಮಾಡಲಾಗುವುದು. ಕೆಲವು ಸಂದರ್ಭಗಳಲ್ಲಿ ಮರುಮೌಲ್ಯಮಾಪನದ ನಂತರ ವಿದ್ಯಾರ್ಥಿಗಳ ಅಂಕಗಳು ಹೆಚ್ಚಾಗಬಹುದು ಅಥವಾ ಕಡಿಮೆಯೂ ಆಗುವ ಅವಕಾಶವಿರುತ್ತದೆ ಎಂಬ ಅಂಶವನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರುವುದು.

for, ಕುಲಸಚಿವರು (ಪರೀಕ್ಷಾಂಗ)

ಗೆ,

1. **ಪ್ರಾಂಶುಪಾಲರು, ಘಟಕ ಕಾಲೇಜುಗಳು/ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**
2. **ನೋಡಲ್ ಅಧಿಕಾರಿಗಳು, ಘಟಕ / ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- ಇಂದೇ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು
3. **ವಿಭಾಗದ ಮೇಲ್ವಿಚಾರಕರು, ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.- ಇಂದೇ ಪ್ರಾಂಶುಪಾಲರುಗಳ ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು.**
4. **ಕಛೇರಿ ಪ್ರತಿ**